ದಿನಾಂಕ 03-11-2023 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 3 ನೇ ಪ್ರತಿವಾದಿ ಪರ ಶ್ರೀ ಎ ಎಮ್ ಪಿ ವಕೀಲರಿಂದ.

ನನ್ನ ತವರು ಮನೆ ಡೋಮಗೇರಾ ಆಗಿರುತ್ತದೆ. ನನ್ನ ಗಂಡ ಅಂಗವಿಕಲ ಆಗಿದ್ದನು ಎಂದರೆ ಸರಿ. ಆತನಿಗೆ ನಡೆಯಲು ಬರುತ್ತಿರಲಿಲ್ಲ ಎಂದರೆ ಸಾಕ್ಷಿ ಕಟ್ಟಿಗೆ ಸಹಾಯುದಿಂದ ನಡೆಯುತ್ತಿದ್ದರು ಎನ್ನುತ್ತಾರೆ. ನನ್ನ ಗಂಡ ಮನೆಯಿಂದ ಹೊರಗೆ 3 ಚಕ್ರದ ಸ್ಕೂಟರ ನಿಂದ ಓಡಾಡುತ್ತಿದ್ದರು ಎಂದರೆ ಸರಿ. ನನ್ನ ಗಂಡನ ತಂದೆಯ ಹೆಸರು ನಾರಾಯಣ ಶಂಕರ ಮಾಚಕ ಆಗಿರುತ್ತದೆ. ನನ್ನ ಗಂಡನ ತಂದೆಯ ತಮ್ಮನ ಹೆಸರು ವಿಷ್ಣು ಶಂಕರ ಮಾಚಕ ಆಗಿರುತ್ತದೆ. ಮೇಲೆ ಹೇಳಿದ ಶಂಕರನಿಗೆ ದುರ್ಗಾಣಿ ಎಂಬ ತಮ್ಮ ಇದ್ದನು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ದುರ್ಗಾಣಿನಿಗೆ ಪ್ರತಿವಾದಿ ನಂಬರ 7 ರ ಗಂಡನಾದ ಸೋಮನಿಂಗ ಮಾಚಕ ಎಂಬ ಮಗ ಇದ್ದನು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸೋಮನಿಂಗನು ಸತ್ತಿದ್ದರಿಂದ ಈ ದಾವೆಯಲ್ಲಿ ಆತನ ಹೆಂಡತಿ ಮಕ್ಕಳನ್ನು ಪ್ರತಿವಾದಿ ನಂಬರ 7 ರಿಂದ 12 ರಂತೆ ಸೇರಿಸಿದ್ದೀರಿ ಎಂದರೆ ಸಾಕ್ಷಿ 7 ರಿಂದ 12 ನೇ ಪ್ರತಿವಾದಿಗಳು ತನ್ನ ದೂರದ ಸಂಬಂಧಿಕರು ಎನ್ನುತ್ತಾರೆ. 7 ರಿಂದ 12 ನೇ ಪ್ರತಿವಾದಿಗಳ ಹೆಸರು ದಾವಾ ಆಸ್ತಿ ನಂಬರ 1 ಡಿ ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಅವರ ಹೆಸರು ಸದರಿ ಆಸ್ತಿಯ ದಾಖಲೆಯಲ್ಲಿ ನಮೂದು ಇರುವುದು ಗೊತ್ತಿದ್ದರೂ ಸಹ ದಾವೆ ಸಲ್ಲಿಸುವ ಸಮಯದಲ್ಲಿ ಅವರನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ತಾನು ತನ್ನ ಮಾವನ ಆಸ್ತಿಯಲ್ಲಿ ಮಾತ್ರ ಪಾಲು ಕೇಳಿ ದಾವೆ ಸಲ್ಲಿಸಿದ್ದೆ ಎನ್ನುತ್ತಾರೆ. ನನ್ನ ವಾದ ಪತ್ರದಲ್ಲಿ ನನ್ನ ಮಾವನಿಗೆ ನಿಖರವಾಗಿ ಎಷ್ಟು ಪಾಲು ಬರುತ್ತದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ನಮೂದಿಸಿರುವ ಎಲ್ಲ ಆಸ್ತಿಗಳಲ್ಲಿ ಪಾಲು ಬೇಕೆಂದು ಕೇಳಿದ್ದರೂ ಸಹ ನಿಖರವಾಗಿ ಎಷ್ಟು ಪಾಲು ಬೇಕೆಂದು ಕೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಕಾನೂನು ಪ್ರಕಾರ ಯಾವುದೇ ವಿಭಜನೆ ಆಗಿಲ್ಲ ಎಂದರೆ ಸರಿ.

ನನ್ನ ಗಂಡನ ಜೊತೆ ನನ್ನ ಮದುವೆ 2001 ರಲ್ಲಿ ಆಗಿರುತ್ತದೆ. ಈ ದಾವೆಯಲ್ಲಿ ನಮ್ಮ ಕುಟುಂಬದ ಮನೆಯ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಿಬ್ಬಲಗೇರಿಯಲ್ಲಿರುವ ಮನೆಗಳ ಪೈಕಿ ನನಗೆ ಒಂದು ಮನೆ ಮತ್ತು ಒಂದು ಖುಲ್ಲಾ ಜಾಗೆ ಬಂದ್ದಿದ್ದರಿಂದ ಹಾಗೂ 1 ನೇ ಪ್ರತಿವಾದಿಗೆ ಒಂದು ಮನೆ ಮತ್ತು ಒಂದು ಖುಲ್ಲಾ ಜಾಗೆ ಬಂದ್ದಿದ್ದರಿಂದ ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುತ್ತಾರೆ. ಸದರಿ ಮನೆಗಳ ಬಾಬ್ತು ನ್ಯಾಯಾಲಯದ ಮೂಲಕ ಪಾಲು ಆಗಿಲ್ಲ ಎಂದರೆ ಸಾಕ್ಷಿ ಪಂಚಾಯತಿದಾರರ ಮತ್ತು ಹಿರಿಯರ ಸಮಕ್ಷಮ ಆಗಿರುತ್ತದೆ ಎನ್ನುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ಹೆಸರಿನ ಮೇಲೆ ಇರುವ ನಾನು ಮನೆ ಕಟ್ಟಿಕೊಂಡಿರುವ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಮೇಲೆ ಹೇಳಿದ ಚಿಬ್ಬಲಗೇರಿ ಗ್ರಾಮದ ಮನೆಯ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ಕಟ್ಟಿಕೊಂಡಿರುವ ಮನೆಯ ಜಾಗವನ್ನು ಮೂಲತಃ ನನ್ನ ಗಂಡ ಜೀವಂತ ಇದ್ದಾಗ ಖರೀದಿಸಿರುವ ಆಸ್ತಿಯ ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಸದರಿ ಜಾಗವನ್ನು ತಾನು 2013 ರಲ್ಲಿ ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ. ಆ ಬಗ್ಗೆ ದಾಖಲೆಗಳು ಇರುತ್ತವೆ. ಆದರೆ ಸದರಿ ದಾಖಲೆಯನ್ನು ಹಾಜರುಪಡಿಸಿಲ್ಲ.

ನನ್ನ ಗಂಡ 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿ. ಅವರು ಬಿ ಎ ವರೆಗೆ ಕಲಿತಿದ್ದರು ಎಂದರೆ ಸುಳ್ಳು. 3 ನೇ ಪ್ರತಿವಾದಿ 3 ನೇ ತರಗತಿ ವರಗೆ ಕಲಿತಿದ್ದಾನೆ ಎಂದರೆ ಸರಿ. ನನ್ನ ಗಂಡನು ಅಂಗವಿಕಲ ಆಗಿದ್ದರಿಂದ ಆತನ ಉಪ ಜೀವನಕ್ಕೆ ಒಟ್ಟು ಕುಟುಂಬದ ಆದಾಯದಿಂದ ಹಳಿಯಾಳದಲ್ಲಿ ಒಂದು ಬಟ್ಟೆ ಮಾರಾಟದ ಅಂಗಡಿ ಮಾಡಿಕೊಡಲಾಗಿತ್ತು ಎಂದರೆ ಸರಿಯಲ್ಲ. ನಿಮ್ಮ ಗಂಡ ಬಟ್ಟೆ ಅಂಗಡಿಯಲ್ಲಿ ಇರುತ್ತಿದ್ದನೋ ಇಲ್ಲವೋ ಎಂದರೆ ಸಾಕ್ಷಿಯು ತಾನೂ ಸಹ ಅಂಗವಿಕಲೆ ಇರುವುದರಿಂದ ತಾನೇ ಸ್ವತಃ ಬಟ್ಗೆ ಅಂಗಡಿ ಇಟ್ಟುಕೊಂಡಿರುತ್ತೇನೆ ಎನ್ನುತ್ತಾರೆ. ಕುಟುಂಬದ ಆದಾಯದಿಂದ ನನ್ನ ಗಂಡನಿಗೆ ಬಟ್ಟೆ ಮಾರಾಟ ಅಂಗಡಿ ಮಾಡಿಕೊಲಾಗಿತ್ತು ಹಾಗೂ ಒಟ್ಟು ಕುಟುಂಬದ ವ್ಯವಹಾರವನ್ನು ನನ್ನ ಗಂಡನೇ ಮಡುತ್ತಿದ್ದನು ಎಂದರೆ ಸರಿಯಲ್ಲ. ನನ್ನ ಗಂಡ ಬಟ್ಟೆ ಅಂಗಡಿ ನೋಡಿಕೊಳ್ಳುತ್ತಿದ್ದರಿಂದ

ಹಾಗೂ ಕುಟುಂಬದ ವ್ಯವಹಾರ ಮಾಡುತ್ತಿದ್ದರಿಂದ ಒಟ್ಟು ಕುಟುಂಬದ ಆದಾಯವು ನನ್ನ ಗಂಡನ ಬಳಿಯೇ ಇರುತ್ತಿತ್ತು ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ಮೇಲೆ ಯಾವುದೇ ವಿಮಾ ಪರಿಹಾರ ಬಂದಿರುವುದಿಲ್ಲ. ನಾನು ಮನೆ ಕಟ್ಟಿರುವ ಮೌಲ್ಯ 50 ಲಕ್ಷಕ್ಕಿಂತ ಹೆಚ್ಚು ಎಂದರೆ ಸರಿ. ಸದರಿ ಮನೆಯನ್ನು ಮೇಲೆ ಹೇಳಿದ ಒಟ್ಟು ಕುಟುಂಬದ ಆದಾಯದಿಂದ ಕಟ್ಟಿದ ಮನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು ತನ್ನ ತವರು ಮನೆಯ ಸಹಾಯದಿಂದ ಹಾಗೂ ಬ್ಯಾಂಕ್ ಸಾಲ ಪಡೆದು ಕಟ್ಟಿದ್ದೇನೆ ಎನ್ನುತ್ತಾರೆ. ಸದರಿ ವಿಚಾರವನ್ನು ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ಇದೇ ಮೊದಲ ಬಾರಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ 1 ಡಿ ಆಸ್ತಿಯಲ್ಲಿ ಸೋಮನಿಂಗನ ವಾರಸುದಾರರಾದ 7 ರಿಂದ 12 ನೇ ಪ್ರತಿವಾದಿಗಳಿಗೆ ಅರ್ಧ ಪಾಲು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇನ್ನೂಳಿದ ಅರ್ಧ ಭಾಗದಲ್ಲಿ ವಿಷ್ಣು ಮಾಚಕ ಮತ್ತು ನಾರಾಯಣ ಮಾಚಕ ರವರಿಗೆ ಸಮ ಅರ್ಧ ಪಾಲು ಇರುತ್ತದೆ ಎನ್ನುತ್ತಾರೆ. ನಾರಾಯಣ ಮಾಚಕ ರವರಿಗೆ ಬರುವ 1/4 ಭಾಗದಲ್ಲಿ ನಮಗೆ 1/8 ಭಾಗ ಮತ್ತು 1 ರಿಂದ 5 ನೇ ಪ್ರತಿವಾದಿಗಳಿಗೆ 1/8 ಭಾಗ ಬರುತ್ತದೆ ಎಂದರೆ ಸರಿ. ಮೇಲೆ ಹೇಳಿದಂತೆ ನಮಗೆ ಮತ್ತು ಪ್ರತಿವಾದಿಗಳಿಗೆ ಪಾಲು ಬರಬೇಕಾಗಿದ್ದರೂ ಸಹ ನನ್ನ ದಾವೆಯಲ್ಲಿ ನಮಗೆ ನಿಖರವಾಗಿ ಎಷ್ಟು ಪಾಲು ಬರುತ್ತದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಪಾಲಿನ ಕುರಿತು ನಮ್ಮ ಮತ್ತು ಪ್ರತಿವಾದಿಗಳ ನಡುವೆ ತಕರಾರು ಬಂದಿದ್ದರಿಂದ ನಾನು ಜೀಜಾಬಾಯಿ ಮಹಿಳಾ ಸಂಘಕ್ಕೆ ದೂರು ನೀಡಿದ್ದೆ ಎಂದರೆ ಸರಿಯಲ್ಲ. ಆ ರೀತಿ ನಾನು ದೂರು ನೀಡಿದ್ದರಿಂದ ಸದರಿ ಮಹಿಳಾ ಸಂಘದವರು ದಾವಾ 1 ಸಿ ಆಸ್ತಿಯನ್ನು ಹಾಗೂ ದಾವಾ 1 ಬಿ ರ ಪೈಕಿ ಅರ್ಧ ಆಸ್ತಿಯನ್ನು 3 ನೇ ಪ್ರತಿವಾದಿಗೆ ಹಾಗೂ ದಾವಾ 1 ಬಿ ಆಸ್ತಿಯಲ್ಲಿ ಇನ್ನೂಳಿದ ಅರ್ಧ ಭಾಗವನ್ನು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಮಾಡಿದ ಪಾಲವನ್ನು ಸದರಿ ಸಂಘದ ಪಂಚಾಯತಿಯಲ್ಲಿ ಒಪ್ಪಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದ ಮನೆ ಆಸ್ತಿಗಳಲ್ಲಿ ಹಾಗೂ ದಾವಾ ಆಸ್ತಿಗಳಲ್ಲಿ 3 ನೇ ಪ್ರತಿವಾದಿಗೆ ಅರ್ಧ ಪಾಲು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಲ್ಲಿದ್ದ ಆಸ್ತಿಗಳು ಆತನ ಮರಣದ ನಂತರ ನನ್ನ ಹೆಸರಿಗೆ ವರ್ಗಾವಣೆ ಯಾಗಿದ್ದರಿಂದ ಸದರಿ ಆಸ್ತಿಗಳು ನನ್ನ ಸ್ವಂತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆ ಆಸ್ತಿಗಳಲ್ಲಿ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ಅವುಗಳನ್ನು ಉದ್ದೇಶಪೂರ್ಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಕುಟುಂಬದ ಬಟ್ಟೆ ಮಾರುವ ಅಂಗಡಿಯಲ್ಲಿಯ ವ್ಯವಹಾರದಲ್ಲಿ ಬಂದ ಲಾಭ ದಲ್ಲಿ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ಅದನ್ನು ಸಹ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತನ್ನ ಜೀವಿತ ಅವಧಿಯಲ್ಲಿ ಮನೆಯ ಯಜಮಾನಿಕೆ ಮಾಡುತ್ತಿದ್ದರೂ ಸಹ 3 ನೇ ಪ್ರತಿವಾದಿ ಒಟ್ಟು ಕುಟುಂಬದ ಯಜಮಾನಿಕೆ ಮಾಡುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ನಾನೇ ರಚಿಸಿದ ಸುಳ್ಳು ಕತೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 6, 7 ರಿಂದ 12 ನೇ ಪ್ರತಿವಾದಿಗಳು ಪ್ರತಿವಾದಿ ಪತ್ರ ಸಲ್ಲಿಸದೇ ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.